ಸ್ಪೇಸ್ ಅನ್ನೂ ನಾವು ಅವರ ಸಮಗ್ರ ಬರಹದ ಹಿನ್ನೆಲೆಯಲ್ಲಿ ಗ್ರಹಿಸಬೇಕಿದೆ. ಅವರ ಪ್ರತಿಯೊಂದು ಸಣ್ಣಕವಿತೆಯಲ್ಲೂ ಒಂದು ವೃತ್ತಾಂತವಿದೆ. ಒಂದೊಂದು ಕವಿತೆಯೂ ಒಂದೊಂದು ಚುಟುಕಾದ ಉಸಿರಿನಂತೆ. ಈ ಚುಟುಕುಗಳೆಲ್ಲ ಒಂದು ದೀರ್ಘ ಉಸಿರಾಗಿದ್ದರೆ ಹೇಗಿರುತ್ತಿತ್ತು? ಎಂದು ಕೆಲವೊಮ್ಮೆ ಯೋಚಿಸುತ್ತೇನೆ. ಒಂದು ಪುಟ್ಟ ಉಸಿರಿನ, ಪುಟ್ಟ ಕವಿತೆಯಲ್ಲಿ ನಾಲ್ಕು ಹೆಜ್ಜೆಗಳ ಚಾರಣ. ಎಚ್‌ಎಸ್‌ವಿಯವರೇ ಹೇಳಿದ್ದಾರಲ್ಲ, "...ಇರುವಿಕೆಯನ್ನು ಅನುಸರಿಸುವುದು ಸಾಧ್ಯವಿಲ್ಲ. ಆಗುವಿಕೆಯಾದರೋ ನಿರಂತರ ತೊಡಗುವಿಕೆಯ ಮಾರ್ಗವಾಗಿದೆ. ಮತ್ತು ನಮ್ಮ ನಮ್ಮ ಚಾರಣ ಶಕ್ತಿಯನ್ನು, ಪ್ರಾಣದ ಬಲವನ್ನೂ ಅವಲಂಬಿಸಿದ್ದಾಗಿದೆ. ಈ ಚಾರಣ ಮಾರ್ಗವನ್ನು ನಮ್ಮ ಸಾಹಿತ್ಯ ಸಂಸ್ಕೃತಿ ಮೊದಲಿನಿಂದಲೂ ಕೈವಾರಿಸುತ್ತಾ ಬಂದಿದೆ. ನನ್ನ ದೃಷ್ಟಿಯಲ್ಲಿ 'ಮಾರ್ಗ' ಎನ್ನುವ ಮಾತಿನ ಅರ್ಥ ಇದೇ ಆಗಿದೆ" ಎಂದು. ಅದಕ್ಕೆಂದೇ ಇವರ ಪದ್ಯರೂಪದ, ಸುಲಭ ಕನ್ನಡದ 'ರಾಮಾಯಣ'ದ ಹೆಸರು 'ಶ್ರೀರಾಮಚಾರಣ' ಎಂದು: ಏರುತ್ತೇರುತ್ತ ಸಿದ್ಧಿಸಿಕೊಳ್ಳಬೇಕಾದ ಗಮ್ಯ?

ಎಚ್‌ಎಸ್‌ವಿ ಅವರು ಕವಿತೆಗಳಲ್ಲಿ ವೃತ್ತಾಂತ/ಕಥಾಲೋಕವನ್ನು ಸೃಷ್ಟಿಸಿಕೊಳ್ಳುವುದಕ್ಕೂ, ಇವರ ಕಾವ್ಯಲೋಕದಲ್ಲಿ ಕಿಕ್ಕಿರಿದು ತುಂಬಿರುವ ಸ್ತ್ರೀಲೋಕಕ್ಕೂ ಹತ್ತಿರದ ಸಂಬಂಧವಿದೆಯೆನ್ನಿಸುತ್ತದೆ. ತಮ್ಮೊಳಗಿನ ಅಹಂಕಾರವನ್ನು ನೀಗಿಕೊಳ್ಳಲು ಬಯಸುವವರು ಮಾತ್ರ ಕಥೆಯನ್ನು ಹೇಳಬಲ್ಲವರು ತಾನೆ? ಅಧಿಕಾರಸ್ಥ ಕಂಠದಲ್ಲಿ ಕಥೆ ಹುಟ್ಟಲಾರದು ಎಂಬುದಕ್ಕೆ ನಮ್ಮ ಇತಿಹಾಸ, ಪುರಾಣಗಳು ಮಾತ್ರವೇಕೆ, ಮನೆಮನೆಯಲ್ಲೂ ಅದರ ನಿದರ್ಶನಗಳಿರುತ್ತವೆ. ಎಚ್‌ಎಸ್‌ವಿ ಅವರ 'ಶಿಶಿರದ ಪಾಡು' (1981) ಎನ್ನುವ ಕವಿತೆಯಿದೆ. ಅದರಲ್ಲಿ, ವಾಲ್ಮೀಕಿಗೆ ಕಾಡಲ್ಲಿ ಒಬ್ಬ ಹೆಣ್ಣುಮಗಳು ಎದುರಾಗುತ್ತಾಳೆ. ಯಾರೆಂದು ಅವನು ಕೇಳಲು, ಅವಳು ಬಿಕ್ಕಳಿಸಿ 'ತಾನು ಸೀತೆ' ಎನ್ನುತ್ತಾಳೆ. 'ಪಟ್ಟಾಭಿಷೇಕ ಮುಗಿಸಿದ ಮೇಲೆ ಹೀಗೇಕೆ ಬಂದೆ?' ಎಂದು ವಾಲ್ಮೀಕಿ ಕೇಳಲು, ಅವಳು, 'ರಾಮನಿರುವನಕ ರಾಮಾಯಣವು ಮುಗಿವುದೆ?/ ಅಂತೆ ಸೀತೆಯ ಚಿಂತೆ ಸಾಯುವನಕ/ ಅಧಿಕಾರದೊಳಗಿಟ್ಟು ಹೇಗೆ ಕತೆ ಮುಗಿಸುವಿರಿ/ ಆಗಲೇ ಆರಂಭ ಬದುಕಿನಣಕ' ಎನ್ನುತ್ತಾಳೆ. ಇತಿಹಾಸದುದ್ದಕ್ಕೂ ಹೆಣ್ಣು ಅಧಿಕಾರವನ್ನು ಬಿಟ್ಟುಕೊಟ್ಟು ಅಥವಾ ಕಳೆದುಕೊಂಡು ಬದುಕಿದವಳು. ಎಚ್‌ಎಸ್‌ವಿ ಅವರು ಹೆಣ್ಣು ನಿಂತಿರುವ ಅಂಚನ್ನೇ ಕವಿತೆಯಾಗಿಸುವ ಮೂಲಕ ಅಂಚನ್ನು ಕೇಂದ್ರವಾಗಿ ಪರಿವರ್ತಿಸುತ್ತಾರೆ. (ಅವರ ಕಾದಂಬರಿ 'ವೇದವತಿ ನದಿಯಲ್ಲ'ದ ಹಲವು ಪಾತ್ರಗಳು ಮತ್ತು 'ಚಿತ್ರಪಟ', 'ಮಂಥರೆ', 'ಉರಿಯ ಉಯ್ಯಾಲೆ' ನಾಟಕಗಳು ಕೂಡ ಇದಕ್ಕೆ ಹೊರತಲ್ಲ). ಈ ಜಗಿತ ಎಲ್ಲ ಕವಿತೆಯಲ್ಲೂ ಬಹಳ ದೊಡ್ಡದಾಗಿದೆ ಎನ್ನಲಾಗದೇ ಹೋದರೂ, ಇಂತಹ ಪ್ರಯತ್ನವು ಕನ್ನಡ ಕಾವ್ಯದ ಆಲೋಚನಾಕ್ರಮವನ್ನು ಬೆಳೆಸಲು ಯತ್ನಿಸಿದೆ ಎಂಬುದಂತೂ ನಿಜ. ಎಲ್ಲ ಬಗೆಯ ಅಧಿಕಾರ ಸ್ಥಾನಗಳನ್ನು ನಿರಾಕರಿಸಿದ ಕೃಷ್ಣನ ಜೀವನದ ಕೆಲವು ನೆಲೆಗಳನ್ನು ಆಧುನಿಕವಾಗಿ ನೋಡುವ ಮೂಲಕ ಅವರು ಕೃಷ್ಣನನ್ನು ಮಾನವೀಕರಣಗೊಳಿಸಿದ ಬಗೆ, ಕೃಷ್ಣನ ಪಾತ್ರಕ್ಕೆ ಅವರು ಮತ್ತೆಮತ್ತೆ ಹಿಂದಿರುಗುವುದು ಮತ್ತು ಕೃಷ್ಣನನ್ನು ಹಲವು ಮುಖಗಳಲ್ಲಿ ತೋರುವ ರಾಧೆಯು ದಿಟ್ಟವಾಗಿ ಮರುಕಳಿಸುವುದು ಕೂಡ ಅವರ ಕಾವ್ಯ ಸಂದರ್ಭದಲ್ಲಿ ಒಂದು ಮೆಟಫರ್ ಆಗಿದೆ.

**ಕೃಷ್ಣ ನಿನ್ನ ಬೇಡಿದವರು**
**ಭಾಗ್ಯವಂತರಾದರು**
**ಕೃಷ್ಣ ನಿನ್ನ ಕಾಡಿದವರು**
**ಕೀರ್ತಿವಂತರಾದರು**
**ಕೃಷ್ಣ ನಿನ್ನ ಕೂಡಿದವರು**
**ಹೇಳೊ ಏನಾದರು?**

'ರಾಧೆ-ಕೃಷ್ಣನಿಗೆ' ಎನ್ನುವ ಈ ಪುಟ್ಟ ಕವಿತೆ ಮಹತ್ವದ ಧ್ವನಿಯು ಅವರ ಭಾವಗೀತೆಗಳು 'ತೋರುವ' ರಾಧೆಗಿಂತ ಭಿನ್ನ ರಾಧೆಯೊಬ್ಬಳನ್ನು ನಮಗೆ ಕಾಣಿಸುತ್ತದೆ.

* * *

ಕನ್ನಡ ಕಾವ್ಯವು ಮೊದಲಿನಿಂದಲೂ ಜನರಿಗೆ ತಲುಪುತ್ತ ಬಂದಿರುವುದು ಮೌಖಿಕವಾದ ನೆಲೆಯಲ್ಲಿ. ಗಮಕ, ಹಾಡು, ಕವಿಗೋಷ್ಠಿಗಳು ಇಂತಹ ಹಾದಿಗಳು. ಬರವಣಿಗೆಯ ಆರಂಭ ಕಾಲದಲ್ಲಿ ಎಚ್‌ಎಸ್‌ವಿ ತಮಗೆ ಸಮಕಾಲೀನವಾಗಿದ್ದ ನವ್ಯದ ಬಗೆಯನ್ನು ಅನುಸರಿಸಿದರೂ ಕ್ರಮೇಣ ಸುಗಮಸಂಗೀತ,